ಕಾಲಿಂಗ್ ಅಟೆನ್‌ಷನ್ ತೆಗೆದು ಎರಡು ಇಡಬೇಕಾಗುಗ್ತದೆ. ಸಂಕ್ಷಿಪ್ತವಾಗಿ ವಿವರಣೆ ಕೇಳಿ, ಸರಿಯಾಗಿ ಸಮಂಜಸವಾಗಿ, ವಿವರವಾಗಿ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು, ಮಧ್ಯೆ ಬಾಯಿ ಹಾಕುತ್ತಿದ್ದೇನೆ. ಇದು ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ವಿಷಯ ಆಗಿರುವುದರಿಂದ ನಾನು ಹೇಳುತ್ತಿದ್ದೇನೆ. ಇದಕ್ಕೆ ಒಂದು ಹೈಪವರ್ ಕಮಿಟಿ ಇದೆ, ಅಲ್ಲಿ ಏನು ತೀರ್ಮಾನವಾಗಿದೆ ಎಲ್ಲರಿಗೂ ಗೊತ್ತಿದೆ. ಇದೇನೂ ಹೊಸ ವಿಷಯ ಅಲ್ಲ. ಪರಿಹಾರವನ್ನು ಮಾರ್ಚ್ ತಿಂಗಳ ಒಳಗೆ ಪೇಮೆಂಟ್ ಮಾಡಿ ಮುಗಿಸಿ ಎಂದು ಅವರು ಹೇಳುತ್ತಿದ್ದಾರೆ. ಅವಾರ್ಡ್ಸ್ ಇದೆ, ಮಂತ್ರಿಯೊಂದು ಇದೆ. ಇದನ್ನು ಕೊಡುವ ಬಗ್ಗೆ ಪ್ರಶ್ನೆ ಇಲ್ಲ, ಯಾವ ತಕರಾರೂ ಇಲ್ಲ. ಸರಕಾರ ಕೊಡಲೇ ಬೇಕು. ಮಾರ್ಚ್ ಒಳಗೆ ಕೊಡಿ ಎಂದು ಅವರು ಹೇಳುತ್ತಿದ್ದಾರೆ. ಮಳೆಗಾಲ ಬಂದಾಗ ಕೊಟ್ಟರೆ ಜನ ಎಲ್ಲಿಗೆ ಹೋಗಬೇಕು ಎಂಬ ಪ್ರಶ್ನೆ ಇದೆ. ಮಾರ್ಚ್ ಆಗದಿದ್ದರೆ, ಏಪ್ರಿಲ್ ೧೫ರ ಒಳಗಾದರೂ ಕೊಟ್ಟು ಮುಗಿಸಿಬಿಟ್ಟರೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಜನ ಎಲ್ಲಿಗೆ ಹೋಗಬೇಕು ?

ಅಧ್ಯಕ್ಷರು.—ಮಾನ್ಯ ರತ್ನಾಕರ್‌ರವರೇ, ನೀವು ಹೊಸಬರು, ಬಂಗಾರಪ್ಪನವರು ಯಾವ ರೀತಿ ಪ್ರಶ್ನೆ ಕೇಳಿದರು ಎಂಬುದನ್ನು ತಿಳಿದುಕೊಳ್ಳುವುದಕ್ಕೂ ನೀವು ತಯಾರಾಗಿಲ್ಲ. ನೀವು ಹೇಳಿದಹಾಗೆ ಮಂತ್ರಿಗಳು ಕೇಳಬೇಕು ಎಂದು ನೀವು ಬಯಸುತ್ತೀರಿ. ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಆದರೆ ಮನೆಯಲ್ಲಿ ನೀವು ಏನೋ ಮಾತನಾಡಬೇಕೆಂದು ಮಾಡಿಕೊಂಡು ಬಂದಿದ್ದೀರಿ, ಅದರ ಪ್ರಕಾರ ಕೇಳಿಕೊಂಡು ಬಿಟ್ಟರೆ ಆಯಿತು.

ಶ್ರೀ ಜೆ. ಹೆಚ್. ಪಟೇಲ್.—ಬಹಳ ಕರೆಕ್ಟ್ ಆಗಿ ಹೇಳಿದಿರಿ. ಈಗ ಈ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆ. ನನಗೂ ಗೊತ್ತಿದೆ. ಹಣವನ್ನು ಆದಷ್ಟು ಬೇಗ ಕೊಡುಸುತ್ತೇನೆಂದು ಹೇಳಿದ್ದೇನೆ. ಅತಿ ಶೀಘ್ರವಾಗಿ ಕೊಡಿಸುತ್ತೇನೆ ಎನ್ನುವುದು ಪಾರ್ಲಿಮೆಂಟರಿ ಭಾಷೆ, ಇಷ್ಟೆ ನಿಮಿಷದಲ್ಲಿ ಇಷ್ಟೇ ಸೆಕೆಂಡ್‌ಗಳಲ್ಲಿ ಕೊಡಿಸುತ್ತೇನೆಂದು ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ಇಷ್ಟೇ ಇಷ್ಟೇ ನಿಮಿಷದಲ್ಲಿ ಇಷ್ಟೇ ಸೆಕೆಂಡ್‌ಗಳಲ್ಲಿ ಹಣ ಕೊಡಿ ಎಂದು ಕೇಳಲಿಲ್ಲ. ತಾವು ಆ ರೀತಿ ಹೇಳಿದರೆ ಅದನ್ನೇ ನಾವು ಪ್ರಾರಂಭ ಮಾಡಬೇಕಾಗುತ್ತದೆ. ಏಪ್ರಿಲ್ ೧೫ನೇ ತಾರೀಖಿನೊಳಗೆ ಕೊಡಿಸಿ ಕೊಡಿ ಎಂದು ನಾನೇ ಒಂದು ಸಲಹೆ ಮಾಡಿದ್ದೆ, ಆ ರೀತಿ ಮಾಡಿ.

ಶ್ರೀ ಜೆ. ಹೆಚ್. ಪಟೇಲ್.—ಅವರಿಗೆ ಹಣ ಕೊಡಲೇಬೇಕು ಕೊಡುತ್ತೇವೆ. ಈಗ ಮಳೆಗಾಲ ಪ್ರಾರಂಭವಾಗುವುದು ಜೂನ್‌ನಲ್ಲಿ ಕೂಡ ಪ್ರಾರಂಭವಾಗುತ್ತದೆ. ನಾನು ಶೀಘ್ರವಾಗಿ ಕೊಡಿಸುತ್ತೇನೆಂದು ಹೇಳಿದ್ದೇನೆ. ನೀವು ಹೇಳಿದ್ದಕ್ಕಿಂತ ಮುಂಚಿತವಾಗಿಯಾದರೂ ಅವರಿಗೆ ಹಣ ಬಿಡುಗಡೆ ಮಾಡಬಹುದು.

III) ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯ ವ್ಯಾಸಂಗಕ್ಕೆ ಕಾಯ್ದಿರಿಸಲಾಗಿದ್ದ ಸೀಟುಗಳನ್ನು ಕಡಿಮೆ ಮಾಡಿರುವುದು

ಶ್ರೀ ಬಿ. ಬಿ. ನಿಂಗಯ್ಯ.— ಮಾನ್ಯ ಅಧ್ಯಕ್ಷರೇ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯ ವ್ಯಾಸಂಗಕ್ಕೆ ಸಂಬಂಧಪಟ್ಟಂತೆ ಹಿಂದೆ ಸೇವೆ ಸಲ್ಲಿಸುತ್ತಿದ್ದ ವೈದ್ಯರುಗಳಿಗೆ ಕಾಯ್ದಿರಿಸಲಾಗಿದ್ದ ಸೀಟುಗಳನ್ನು ಕಡಿಮೆ ಮಾಡಿರುವುದರ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಸಚಿವರು).—

ಈ ಹಿಂದೆ ಸೇವೆಯಲ್ಲಿರುವ ವೈದ್ಯರುಗಳಿಗೆ ಶೇಕಡ ೫೦ರಷ್ಟು ಸೀಟುಗಳನ್ನು ಸ್ನಾತಕೋತ್ತರ ಶಿಕ್ಷಣದಲ್ಲಿ ಕಾಯ್ದಿರಿಸಲಾಗುತ್ತಿದೆಯೆಂದು ಹೇಳುವುದು ನಿಜವಲ್ಲ, ಕಳೆದ ೧೯೮೫-೮೬ನೇ ಶೈಕ್ಷಣಿಕ ವರ್ಷದಲ್ಲಿ ಒಟ್ಟು ೮೯ ಸೀಟುಗಳನ್ನು ಪ್ರಸಕ್ತ ಸಾಲಿಗೆ ಅಂದರೆ ೧೯೮೬-೮೭ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಒಟ್ಟು ೧೮೭ ಸೀಟುಗಳನ್ನು ಸೇವೆಯಲ್ಲಿರುವ ವೈದ್ಯರುಗಳಿಗಾಗಿ ಮೀಸಲಿಡಲಾಗಿದೆ.

ಸೇವೆಯಲ್ಲಿರುವ ವೈದ್ಯರುಗಳಿಗೆ ಮೀಸಲಿಡುವ ಸೀಟುಗಳನ್ನು ಶೇಕಡವಾರು ಆಧಾರದ ಮೇಲೆ ಮಾಡುತ್ತಿಲ್ಲ. ಸರ್ಕಾರದ ಸೇವೆಗೆ ಅಗತ್ಯವೆನಿಸಿದ ವಿಷಯ ವಿಭಾಗಗಳಲ್ಲಿ ಉನ್ನತ ಶಿಕ್ಷಣ ಪಡೆದ ವೈದ್ಯರುಗಳ ಸಂಖ್ಯೆ ಎಷ್ಟಿರಬೇಕೆಂಬ ಆಧಾರದ ಮೇಲೆ ಸ್ನಾತಕೋತ್ತರ ಸೀಟುಗಳ ಸಂಖ್ಯೆಯನ್ನು ವಿಂಗಡಿಸಲಾಗುತ್ತಿದೆ. ಸೇವೆಯಲ್ಲಿರುವ ಸಹಾಯಕ ಶಸ್ತ್ರ ಚಿಕಿತ್ಸಕರುಗಳ ಪೈಕಿ ಈಗಾಗಲೇ ಸುಮಾರು ೯೦೦ ವೈದ್ಯರುಗಳು ಸ್ನಾತಕೋತ್ತರ ಶಿಕ್ಷಣ ಹೊಂದಿರುತ್ತಾರೆ. ಪ್ರತಿವರ್ಷ ಸುಮಾರು ೩೨೦ಕ್ಕಿಂತ ಹೆಚ್ಚು ಸೇವೆಯಲ್ಲಿರುವ ವೈದ್ಯರುಗಳು ಸ್ನಾತಕೋತ್ತರ ಶಿಕ್ಷಣ ವ್ಯಾಸಂಗದಲ್ಲಿ ತೊಡಗುತ್ತಾರೆ. ಹೀಗೆ ಸ್ನಾತಕೋತ್ತರ ಶಿಕ್ಷಣ ಹೊಂದಿದ ವೈದ್ಯರುಗಳು ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಲ್ಲಿ ತಾವು ಹೊಂದಿರುವ ಶಿಕ್ಷಣಕ್ಕೆ ಅನುಗುಣವಾಗಿ ಸೇವೆ ಸಲ್ಲಿಸಲು ಸೌಕರ್ಯವಿಲ್ಲವೆಂದು ಬಹುಪಾಲು ವೈದ್ಯರುಗಳು ಬೋಧಕ ವೃಂದಕ್ಕೆ (ಕೇಡರ್) ಬದಲಾವಣೆಗೆ ಕೋರಿ ಮನವಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಅನುಭವಕ್ಕೆ ಬಂದಿದೆ.

ಮೇಲೆ ತಿಳಿಸಿರುವಂತೆ ಈಗಾಗಲೇ ಸಾಕಷ್ಟು ವೈದ್ಯರುಗಳು ಸ್ನಾತಕೋತ್ತರ ಶಿಕ್ಷಣವನ್ನು ಹೊಂದಿರುವುದರಿಂದ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರತಿನಿಯೋಜಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಆದ ಕಾರಣ ಸರ್ಕಾರದ ಸೇವಾ ದೃಷ್ಟಿಯಿಂದ ಅಗತ್ಯವಿರುವಷ್ಟರ ಮಟ್ಟಿಗೆ ಸ್ನಾತಕೋತ್ತರ ಶಿಕ್ಷಣಕ್ಕೆ ಕಳಿಸಬೇಕಾದ ವೈದ್ಯರುಗಳ ಸಂಖ್ಯೆಯನ್ನು ಪ್ರತಿವರ್ಷವೂ ನಿಗಧಿಪಡಿಸಲಾಗುತ್ತಿದೆ. ಪ್ರತಿ ವರ್ಷವೂ ಒಂದೇ ಸಂಖ್ಯೆಯಲ್ಲಿ ಸೇವೆಯಲ್ಲಿರುವ ವೈದ್ಯರುಗಳನ್ನು ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರತಿನಿಯೋಜಿಸಬೇಕೆಂಬ ಯಾವುದೇ ನಿಯಮ ಇರುವುದಿಲ್ಲ. ಆದ ಕಾರಣ ಆಯಾ ವರ್ಷ ಅವಶ್ಯವೆನಿಸುವಷ್ಟು ಸಂಖ್ಯೆಯಲ್ಲಿ ಸೇವೆಯಲ್ಲಿರುವ ವೈದ್ಯರುಗಳಿಗೆ ಸ್ನಾತಕೋತ್ತರ ಶಿಕ್ಷಣಕ್ಕೆ ಈ ಸೀಟುಗಳನ್ನು ಗೊತ್ತುಪಡಿಸಲಾಗುತ್ತಿದೆ. ಇದು ಏನೇ ಇರಲಿ ಪ್ರಸಕ್ತ ಸಾಲಿನಲ್ಲಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಸೀಟುಗಳನ್ನು ನಿಗಧಿಪಡಿಸಲಾಗಿದೆ.

ಭೋಧಕ ವೃಂದಕ್ಕೆ ಸಂಬಂಧಿಸಿದಂತೆ ಸೀಟುಗಳ ಸಂಖ್ಯೆಯನ್ನು ಸೇವೆಯಲ್ಲಿರುವ ವೈದ್ಯರುಗಳು ಸ್ನಾತಕೋತ್ತರ ಶಿಕ್ಷಣ ಹೊಂದಿಲ್ಲದಿರುವವರ ಸಂಖ್ಯೆಯನ್ನು ಅನುಸರಿಸಿ ಅವರಿಗೆ ಸೀಟುಗಳನ್ನು ನಿಗಧಿಪಡಿಸಿದೆ. ಸರ್ಕಾರಿ ಸೇವಾ ನಿಯಮದ ಪ್ರಕಾರ ಸ್ನಾತಕೋತ್ತರ ಶಿಕ್ಷಣಕ್ಕೆ ಸೇವೆಯಲ್ಲಿರುವ ವೈದ್ಯರುಗಳು ಪ್ರತಿನಿಯೋಜನೆಗೆ ಅರ್ಹತೆ ಪಡೆಯಲು ಕನಿಷ್ಟ ೫ ವರ್ಷಕ್ಕೆ ಕಡಿಮೆ ಇಲ್ಲದೆ ಸಕ್ರಮವಾಗಿ ಸೇವೆ ಸಲ್ಲಿಸಿರಬೇಕಾ, ಮತ್ತು ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.

ಈವರೆಗೂ ಸ್ಥಳೀಯ ಅಭ್ಯರ್ಥಿಗಳಾಗಿದ್ದು ಇತ್ತೀಚೆಗೆ ಕಳೆದ ವರ್ಷದ ಅಂತ್ಯ ಭಾಗದಲ್ಲಿ ಅವರ ಸೇವೆಯನ್ನು ಸಕ್ರಮಗೊಳಿಸಲಾಗಿದ್ದು ಅಂಥವರುಗಳು ಮತ್ತು ೫ ವರ್ಷಕ್ಕಿಂತ ಕಡಿಮೆ ಸೇವೆ ಹೊಂದಿರುವವರು ಕೆಲವು ವೈದ್ಯರುಗಳು ಅರ್ಹತೆ ಹೊಂದಿಲ್ಲದಿದ್ದರೂ ಕೂಡ ತಮಗೆ ಸಾಕಷ್ಟು ಸೀಟುಗಳನ್ನು ಕಾಯ್ದಿರಿಸಿಲ್ಲವೆಂದು ಮನವಿ ಮಾಡಿಕೊಂಡಿರುತ್ತಾರೆ. ಆದರೆ ಇವರು ಸೇವಾ ನಿಯಮಗಳ ಪ್ರಕಾರ ಸ್ನಾತಕೋತ್ತರ ಶಿಕ್ಷಣ ವ್ಯಾಸಂಗಕ್ಕೆ ಪ್ರತಿನಿಯೋಜನೆ ಪಡೆಯಲು ಅರ್ಹರಿಲ್ಲವಾದ್ದರಿಂದ ಹೆಚ್ಚಿನ ಸೀಟುಗಳನ್ನು ಕಾಯ್ದಿರಿಸುವ ಅವಶ್ಯಕತೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ೧೯೮೫—೮೬ರಲ್ಲಿ ೮೪ ಸೀಟುಗಳನ್ನು ಮತ್ತು ೧೯೮೬—೮೭ರಲ್ಲಿ ೧೦೭ ಸೀಟುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆ ಕೇಳುವುದೇನೆಂದರೆ ೧೯೮೬—೮೭ನೇ ಸಾಲಿನಲ್ಲಿ ಕೊಟ್ಟಿರತಕ್ಕಂಥ ಸೀಟ್‌ನಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ ಎನ್ನುವುದನ್ನು ತಮ್ಮನಿಂದ ಕೇಳಬಯಸುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

೧—೦೦ ಪಿ. ಎಂ.

ಅಧ್ಯಕ್ಷರು.— ನಿಯಮ ೩೩ರ ಮೇಲಿನ ಚರ್ಚೆ ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಒಂದು ಪ್ರಕಟಣೆ ಇದೆ. ಅದನ್ನು ಓದುತ್ತೇನೆ.

ಪ್ರಕಟಣೆ

ಅಧ್ಯಕ್ಷರು.— ಬೆಂಗಳೂರು, ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಸೆನೆಟ್‌ಗಳಿಗೆ ಸಂಬಂಧಪಟ್ಟ ಚುನಾವಣೆಯ ಬಗ್ಗೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಒಮ್ಮತಕ್ಕೆ ಬಂದು ಸರ್ವಸಮ್ಮತವಾದ ಒಂದು ಪಟ್ಟಿಯನ್ನು ನೀಡಿದ್ದಾರೆ. ಆದ್ದರಿಂದ, ಈ ಬಗ್ಗೆ ಚುನಾವಣೆಗಳು ಇರುವುದಿಲ್ಲ. ವಿವಿಧ ಸೆನೆಟ್‌ಗಳಿಗೆ ಚುನಾಯಿತರಾದ ಸದಸ್ಯರುಗಳ ಪಟ್ಟಿ ಈ ರೀತಿ ಇರುತ್ತದೆ.—

ಬೆಂಗಳೂರು ವಿಶ್ವವಿದ್ಯಾನಿಲಯ :—

೧) ಶ್ರೀ ಕೆ. ಎಂ. ಮುನಿಯಪ್ಪ
೨) ಶ್ರೀ ಮಂಟೂರ್ ಗೂಳಪ್ಪ ವೆಂಕಟಪ್ಪ
೩) ಶ್ರೀ ಉಪ್ಪಿನ್ ಬಸಪ್ಪ ಅನ್ನದಾನಪ್ಪ
೪) ಶ್ರೀ ಎಂ. ವರದೇಗೌಡ ಹಾಗೂ
೫) ಶ್ರೀ ವಿನಯಕುಮಾರ್ ಸೊರಕೆ

ಕರ್ನಾಟಕ ವಿಶ್ವವಿದ್ಯಾನಿಲಯ :—

೧) ಅಜ್ಜಿಬಾಳ್ ಜಿ. ಎಸ್. ಹೆಗಡೆ
೨) ಶ್ರೀ ಕೌಜಲಗಿ ಶಿವಾನಂದ ಹೇಮಪ್ಪ
೩) ಡಾ. ಎಂ. ಪುಷ್ಪಾವತಿ
೪) ಶ್ರೀ ಪ್ರಭಾಕರ ಸದಾಶಿವರಾಣೆ ಹಾಗೂ
೫) ಶ್ರೀ ಶರಣಬಸಪ್ಪ ಮಾಲಿ ಪಾಟೀಲ್

ಮೈಸೂರು ವಿಶ್ವವಿದ್ಯಾನಿಲಯ.—

೧) ಡಾ. ಬಿ. ಎಂ. ತಿಪ್ಪೇಸ್ವಾಮಿ
೨) ಶ್ರೀ ಬಿ. ಡಿ. ಬಸವರಾಜು
೩) ಶ್ರೀ ಕೃಷ್ಣ
೪) ಶ್ರೀ ಆಗಡಿ ವಿರೂಪಾಕ್ಷಪ್ಪ ಸಂಗಣ್ಣ ಹಾಗೂ
೫) ಶ್ರೀ ಎಸ್. ಪುಟ್ಟಸ್ವಾಮಿ.

ನಿಯಮ 334 ರ ಮೇರೆಗೆ

(i) ದಕ್ಷಿಣ ಕನ್ನಡ ಜಿಲ್ಲೆಯ ಕಣ್ಣೂರು ಗ್ರಾಮದ ವ್ಯಾಪ್ತಿಯ ಕಂಬ್ಲಿ ಕೋಡಿ ಕೋರಿಯಾರ್, ಎಂಬಲ್ಲಿ ತೆಗೆದಿರುವ ಬಾವಿಯಿಂದ ಪರಿಸರದ ಗ್ರಾಮಗಳಿಗೆ ನೀರನ್ನೊದಗಿಸುವುದು,

ಶ್ರೀ ಎನ್. ಎಂ. ಆಡ್ಯಂತಾಯ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಕಣ್ಣೂರು ಗ್ರಾಮದ ವ್ಯಾಪ್ತಿಯ ಕಂಬ್ಲಿಕೋಡಿ–ಕೋರಿಯಾರ್ ಎಂಬ ಸ್ಥಳದಲ್ಲಿ ಡಿ.ಪಿ.ಎ.ಪಿ. ವತಿಯಿಂದ ತೆಗೆದಿರುವ ಕೊಳವೆ ಬಾವಿಯಲ್ಲಿ ಸಾಕಷ್ಟು ನೀರು ದೊರಕಿದ್ದು, ಗ್ರಾಮಸ್ಥರು ಸಂತಸ ಗೊಂಡಿದ್ದಾರೆ. ಯಥೇಚ್ಛವಾಗಿ ದೊರೆತಿರುವ ಈ ಕೊಳವೆ ಬಾವಿಯಿಂದ ಬೆಲ್ಲೂರು ಮತ್ತು ಪರಿಸರದ ಗ್ರಾಮಗಳಿಗೆ ವಾಟರ್ ಸಪ್ಲೈ ಸ್ಕೀಮ್ ಮಂಜೂರಾತಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡ ಬೇಕೆಂದು ಮಾನ್ಯ ಗ್ರಾಮಾಭಿವೃದ್ಧಿ ಸಚಿವರಿಗೆ ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ.— ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಉತ್ತರವನ್ನು ಕಳುಹಿಸಿಕೊಡುತ್ತೇನೆ.